KATK010047762023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ.106/2023**

ಪ್ರಾ.ಸಾ. : **4**

ದೋ.ಸಾ. : **3**

ದಿ.**29.01.2026**

ಹೆಸರು : ಕಾವ್ಯಶ್ರೀ

ತಂದೆಯ ಹೆಸರು : ಕುಮಾರ್

ವಯಸ್ಸು : **16** ವರ್ಷ

ಉದ್ಯೋಗ : **10** ನೇ ತರಗತಿ ವಿದ್ಯಾರ್ಥಿ

ವಾಸಸ್ಥಳ : ಕ್ಯಾತ್ಸಂದ್ರ, ತುಮಕೂರು

ಪ್ರಶ್ನೆ : ನಿನ್ನ ಹೆಸರೇನು **?**

ಉತ್ತರ : ಕಾವ್ಯಶ್ರೀ

ಪ್ರಶ್ನೆ : ಯಾವ ತರಗತಿಯಲ್ಲಿ ಓದುತ್ತಿದ್ದೀಯಾ **?**

ಉತ್ತರ : **10** ನೇ ತರಗತಿ

ಪ್ರಶ್ನೆ : ನೀನು ಎಲ್ಲಿಗೆ ಬಂದಿದ್ದೀಯಾ **?**

ಉತ್ತರ : ಕೋರ್ಟಿಗೆ ಬಂದಿದ್ದೇನೆ.

ಪ್ರಶ್ನೆ : ಕೋರ್ಟಿನಲ್ಲಿ ಸತ್ಯ ಹೇಳಬೇಕೋ, ಸುಳ್ಳು ಹೇಳಬೇಕೋ **?**

ಉತ್ತರ : ಸತ್ಯ

ಪ್ರಶ್ನೆ : ಸುಳ್ಳು ಹೇಳಿದರೆ ಏನಾಗುತ್ತದೆ **?**

ಉತ್ತರ : ಸುಳ್ಳು ಹೇಳಿದರೆ ತೊಂದರೆಯಾಗುತ್ತದೆ.

ಪ್ರಶ್ನೆ : ಕೋರ್ಟಿಗೆ ಏತಕ್ಕೆ ಬಂದಿದ್ದೀಯಾ **?**

ಉತ್ತರ : ನಿಜ ಹೇಳಲು

ಮೇಲಿನ ಪ್ರಶ್ನೆಗಳಿಂದ ಈ ಸಾಕ್ಷಿಗೆ ಹಾಕಲಾದ ಪ್ರಶ್ನೆಗಳನ್ನು ಅರ್ಥ ಮಾಡಿಕೊಂಡು ಉತ್ತರವನ್ನು ನೀಡುವ ಸಾಮರ್ಥ್ಯವಿದೆ ಎಂದು ಕಂಡುಬರುತ್ತಿದ್ದು, ಅದರಂತೆ ಸಾಕ್ಷಿಗೆ

ಸತ್ಯಪ್ರತಿಜ್ಞೆಯ ಪ್ರಮಾಣವಚನವನ್ನು ಬೋಧಿಸಬಹುದೆಂಬ ಅಭಿಪ್ರಾಯಕ್ಕೆ ಬರುತ್ತಾ ಸಾಕ್ಷಿಗೆ ಸತ್ಯಪ್ರತಿಜ್ಞೆಯ ಪ್ರಮಾಣವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

1. ಆರೋಪಿ ನನ್ನ ತಂದೆ. ಮೃತ ಮಾಲ ನನ್ನ ತಾಯಿ. ದಿವ್ಯ ನನ್ನ ಅಕ್ಕ. ಚಾ ಸಾ1 ಜಯಮ್ಮ ನನ್ನ ಅಜ್ಜಿ. ಮೂರಾವರೆ ವರ್ಷಗಳ ಹಿಂದೆ ನನ್ನ ತಾಯಿ ತೀರಿಕೊಂಡಿದ್ದಾರೆ. ನನ್ನ ತಾಯಿಗೆ 2-3 ವರ್ಷಗಳಿಂದ ಹೊಟ್ಟೆನೋವು ಬರುತ್ತಿತ್ತು. ನನ್ನ ತಾಯಿ ರಾತ್ರಿ ನಾವು ಮಲಗಿದ್ದಾಗ ಸೀರೆಯನ್ನು ಬಳಸಿ, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ವಿಚಾರವನ್ನು ನಾನು ಅಜ್ಜಿಗೆ ತಿಳಿಸಿದೆನು. ನನ್ನ ತಂದೆ-ತಾಯಿ ಮನೆಯಲ್ಲಿ ಚೆನ್ನಾಗಿದ್ದರು. ನಂತರ ಪೋಲೀಸರು ನನ್ನ ತಾಯಿಯ ಮೃತದೇಹದ ಮರಣೋತ್ತರ ಪರೀಕ್ಷೆ ಮಾಡಿಸಿದರು. ಆಕೆ ಏಕೆ ಆತ್ಮಹತ್ಯೆ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ನನ್ನ ತಾಯಿಯ ಹಸ್ತಾಕ್ಷರವನ್ನು ಗುರುತಿಸಲು ಸಾಧ್ಯವಿಲ್ಲ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

2. ಆರೋಪಿ ಪ್ರತಿದಿನ ಮದ್ಯಪಾನ ಮಾಡಿಕೊಂಡು ಬಂದು ನನ್ನ ತಾಯಿಯ ಜೊತೆ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆತ ಸಂಸಾರಕ್ಕೆ ಯಾವುದೇ ಹಣ ಕೊಡದೆ, ಕೆಲಸವನ್ನು ಮಾಡದೆ ತಿರುಗಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಸುಮಾರು ಜನರ ಹತ್ತಿರ ಸಾಲ ಸಂಸಾರ ನಡೆಸಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ಆರೋಪಿಗೆ ನನ್ನ ಅಜ್ಜಿ ಬಂದು ನ್ಯಾಯ ಪಂಚಾಯತಿ

ಮಾಡಿ ಬುದ್ಧಿವಾದ ಹೇಳಿದ್ದರು ಎಂದರೆ ಸರಿಯಲ್ಲ. ದಿ.17.07.2022 ರಂದು ರಾತ್ರಿ 9.30 ಗಂಟೆಗೆ ನನ್ನ ತಂದೆ ಕುಡಿದುಕೊಂಡು ಬಂದು ಮನೆಯಲ್ಲಿ ಜಗಳ ಮಾಡಿ, ಕೆಟ್ಟ ಕೆಟ್ಟ ಮಾತುಗಳಿಂದ ನನ್ನ ತಾಯಿಯನ್ನು ಉದ್ದೇಶಿಸಿ ನೀನು ಎಲ್ಲಿಯಾದರೂ ಹೋಗಿ ಸಾಯಿ ಎಂದು ಬೈದು, ನಮ್ಮನ್ನು ಕರೆದುಕೊಂಡು ಹೋಗಿ ಎದುರುಮನೆ ಸುವರ್ಣಮ್ಮನ ಮನೆಯಲ್ಲಿ ರಾತ್ರಿ ಮಲಗಿಸಿ, ಅವರು ಸಹ ಅಲ್ಲೇ ಮಲಗಿದ್ದರು, ಗುಡಿಸಲಿನಲ್ಲಿ ನನ್ನ ತಾಯಿ ಒಬ್ಬರೇ ಇದ್ದರು, ನಾವುಗಳು ಬೆಳಿಗ್ಗೆ ನೋಡಿದಾಗ ತಾಯಿ ಸೀರೆಯಿಂದ ನೇಣು ಹಾಕಿದ್ದು ಕಂಡುಬಂದಿತು ಎಂದರೆ ಸರಿಯಲ್ಲ. ಆಕೆಯನ್ನು ಕೆಳಗೆ ಇಳಿಸಿ ಮಂಚದ ಮೇಲೆ ಮಲಗಿಸಿ ನೋಡಿದಾಗ ಆಕೆ ಮೃತಪಟ್ಟಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ಅಜ್ಜಿಗೆ ವಿಚಾರ ತಿಳಿಸಿದಾಗ ಅವರು ದೂರು ಕೊಟ್ಟರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದೇನೆಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ9 ಎಂದು ಗುರುತಿಸಲಾಯಿತು. ನನ್ನ ತಾಯಿಯ ಹಸ್ತಾಕ್ಷರವನ್ನು ಗುರುತಿಸಲಾಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ತಂದೆಯಾಗಿರುವುದರಿಂದ ಅವರನ್ನು ಈ ಪ್ರಕರಣದಿಂದ ಬಚಾವು ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಹೆಚ್.ಎನ್.ಗುರುನಂಜೇಗೌಡ, ವಕೀಲರಿಂದ ಆರೋಪಿತನ ಪರವಾಗಿ**

ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು